ಇಂದು ದಿಃ**25-07-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಆರ್ ವಕೀಲರಿಂದ 1 ರಿಂದ 6, 19(ಎ) ದಿಂದ (ಡಿ) ಪ್ರತಿವಾದಿಗಳ ಪರಃ**

ನನ್ನ ಅಜ್ಜ ಹಾಲಯ್ಯ ಈತನ ಅಣ್ಣ ಗುರುಶಾಂತಯ್ಯ ಇವನಿಗೆ 3 ಜನ ಗಂಡು ಮಕ್ಕಳು, ಅವರುಗಳೆಂದರೆ ಕರಿಬಸಯ್ಯ, 5 ಮತ್ತು 6 ನೇ ಪ್ರತಿವಾದಿಯರು. ಕರಿಬಸಯ್ಯ ತೀರಿಕೊಂಡಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂ.1 ರಿಂದ 4 ಅವರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ಗುರುಶಾಂತಯ್ಯನ ಮರಣದ ನಂತರ, ಸರ್ವೆ ನಂಬರ್ 67 ಇದು ಆತನ ಹಿರಿಯ ಮಗ ಕರಿಬಸಯ್ಯನ ಹೆಸರಿಗೆ ಖಾತೆ ವರ್ಗಾವಣೆ ಆಯಿತು ಎಂದರೆ ನನಗೆ ಮಾಹಿತಿ ಇಲ್ಲ. ಸರ್ವೆ ನಂಬರ್ 67 ರ ಒಟ್ಟು ಕ್ಷೇತ್ರ 8 ಎಕರೆ 20 ಗುಂಟೆ ಎಂದರೆ ಸರಿ. ಸಾಕ್ಷಿ ಪುನಃ 12 ಎಕರೆ 20 ಗುಂಟೆ ಎಂದು ಹೇಳುತ್ತಾರೆ. ಈ 12 ಎಕರೆ 20 ಗುಂಟೆಯಲ್ಲಿ 4 ಎಕರೆ ಜಮೀನನ್ನು ಪೂರ್ವದ ಕಡೆಗೆ 18 ನೇ ಪ್ರತಿವಾದಿ ಕ್ರಯಕ್ಕೆ ಪಡೆದು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ನಾವು ಹಾಜರುಪಡಿಸಿದ ದಾಖಲೆಗಳು ಸರಿ ಇವೆ ಎಂದರೆ ನಿಜ. ಸಾಕ್ಷಿಗೆ ನಿ.ಪಿ-36 ನ್ನು ತೋರಿಸಿ ಅದರ ಪ್ರಕಾರ ದಿನಾಂಕಃ28-12-1966 ರಲ್ಲಿ ರೂ.1 ಸಾವಿರಕ್ಕೆ ಕರಿಬಸಯ್ಯ ಈತ ರಾಮಚಂದ್ರಪ್ಪ ಈತನಿಗೆ ಮಾರಾಟ ಮಾಡಿದ್ದಾನೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಆದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಅದೇ ರೀತಿ ದಿನಾಂಕಃ04-04-1985 ರಲ್ಲಿ ಈ ರಾಮಚಂದ್ರಪ್ಪ 18 ನೇ ಪ್ರತಿವಾದಿಗೆ ರೂ.1 ಸಾವಿರಕ್ಕೆ ಮಾರಾಟ ಮಾಡಿದ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿ, ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಿ.ಪಿ-36 ನ್ನು ನಾನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನನಗೆ ಈ ಕ್ರಯಗಳ ಬಗ್ಗೆ ಮಾಹಿತಿ ಇದ್ದರೂ, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ.

ದಾವಾ ಆಸ್ತಿಯ ಒಟ್ಟು ಕ್ಷೇತ್ರ 8 ಎಕರೆ 20 ಗುಂಟೆ ಎಂದು ತೋರಿಸಿದ್ದೇವೆ ಎಂದರೆ ಸರಿ. ಸಾಕ್ಷಿ 12 ಗುಂಟೆ 20 ಗುಂಟೆ ತೋರಿಸಿರುತ್ತೇವೆ ಆದರೆ ಈಗ ಇರುವುದು 8 ಎಕರೆ 20 ಗುಂಟೆ ಎಂದು ಹೇಳುತ್ತಾರೆ. ಸಾಕ್ಷಿಗೆ ದಿನಾಂಕಃ21-06-2004 ರ ಒಂದು ನೊಂದಾಯಿತ ಪಾಲುವಿಭಾಗ ಪತ್ರವನ್ನು ತೋರಿಸಿ ಅದರ ಪ್ರಕಾರ ಪ್ರತಿವಾದಿ ನಂ. 1 ರಿಂದ 6, ಗುರುಶಾಂತಯ್ಯನ ವಾರಸುದಾರರು ಪಾಲುವಿಭಾಗಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಪಾಲುವಿಭಾಗಪತ್ರದ ಪ್ರಕಾರ ಅವರ ಹೆಸರಿಗೆ ಮುಟೇಷನ್ ಸಹ ಆಗಿದೆ ಎಂದರೆ ಮಾಹಿತಿ ಇಲ್ಲ. 2004 ರಿಂದ ಅವರ ಹೆಸರುಗಳು ಪಹಣಿಯಲ್ಲಿ ಬರುತ್ತಿವೆ ಎಂದರೆ ಸಾಕ್ಷಿ, ಹೆಸರು ಬರುತ್ತಿವೆ ಆದರೆ ನನಗೆ ಮಾಹಿತಿ ಇಲ್ಲ ಎಂದು ಹೇಳ್ಳುತಾರೆ.

ನನ್ನ ಅಜ್ಜ ಹಾಲಯ್ಯ ಈತ ತನ್ನ ಹಿಸ್ಸೆಯನ್ನು ನೊಂದಾಯಿತ ದಾಖಲೆಯ ಮುಖಾಂತರ ಗುರುಶಾಂತಯ್ಯ ಈತನಿಗೆ ಮಾರಾಟ ಮಾಡಿರುವ ಕಾರಣ, ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ, ಮಾರಾಟ ಮಾಡಿಲ್ಲ, ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಈ ದಾವೆ ದಾಖಲು ಮಾಡುವ ಮೊದಲು ಪ್ರತಿವಾದಿಯರಿಗೆ ಹಿಸ್ಸೆಕೊಡಲು ಕೇಳಿದ್ದೇವು, ಅವರು ನಿರಾಕರಿಸಿರುತ್ತಾರೆ. ಕೆಂಚವೀರಯ್ಯ ಎಂಬ ಹಿರಿಯರನ್ನು ಕರೆದುಕೊಂಡು ಹೋಗಿ ಕೇಳಿದ್ದೇವು. ಸಾಕ್ಷಿ ಪುನಃ ಪೋನ್ ಮುಖಾಂತರ ಕೇಳಿದ್ದೇವು ಎಂದು ಹೇಳುತ್ತಾರೆ. ನಾನು ಒಂದು ಸಲ ನೇರವಾಗಿ ಹೋಗಿ ಕೇಳಿದ್ದೇನು, ಅವರು ಪಾಲುಕೊಡುವುದಿಲ್ಲ ಎಂದು ಹೇಳಿದರು. ವಕೀಲರ ಮುಖಾಂತರ ಪಾಲು ಕೇಳಿ ನೋಟೀಸ್ ಕೊಟ್ಟಿರುವುದಿಲ್ಲ. ಈ ದಾವೆ ದಾಖಲು ಮಾಡುವ ಮೊದಲು ನಾನು ಪ್ರತಿವಾದಿಯರಿಗೆ ಪಾಲುಕೊಡಿ ಎಂದು ವಿಚಾರಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಅಜ್ಜ 1988 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಆ ಕಾರಣದಿಂದ ನಮ್ಮ ದಾವೆ ಕಾಲಪರಿಮಿತಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ದಾವೆ ಆ ಕಾರಣಕ್ಕೆ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯರೊಂದಿಗೆ ದಾವಾ ಆಸ್ತಿಯ ಜಂಟಿ ಅನುಭವದಲ್ಲಿ ಇರುವ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಆದರೆ ಜಂಟಿ ಅನುಭವದಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ಈ ದಾವೆಗೋಸ್ಕರ ಜಂಟಿ ಅನುಭವದಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ತನ್ನ ಜೀವಿತ ಅವಧಿಯಲ್ಲಿ ತನ್ನ ಹಿಸ್ಸೆಯನ್ನು ಮಾರಾಟ ಮಾಡಿದ ಕಾರಣ, ನಮಗೆ ಯಾವುದೇ ಹಕ್ಕು ದಾವಾ ಆಸ್ತಿಯಲ್ಲಿ ಪ್ರಾಪ್ತ ಆಗುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಸುಳ್ಳು ದಾವೆ ಸಲ್ಲಿಸಿ, ಅದಕ್ಕೆ ಅನುಗುಣವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.